ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.519/2021

| | | | |
|---|---|---|---|
| ಹೆಸರು | : | ವೆಂಕಟೇಶ್ | ಸಿ .ಡಬ್ಲ್ಯೂ:7 |
| ತಂದೆ ಹೆಸರು | : | ರಾಮಣ್ಣ | ಪಿ .ಡಬ್ಲ್ಯೂ:7 |
| ವಯಸ್ಸು | : | 65 ವರ್ಷ | |
| ಉದ್ಯೋಗ | : | ನಿವೃತ್ತ ASI | |
| ವಾಸಸ್ಥಳ | : | ಸಿರಿವರ ಗ್ರಾಮ | |

ಸಾಕ್ಷಿಯನ್ನು ದಿಃ 21-07-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ದಿಃ 2017 ನವೆಂಬರ್ ನಿಂದ ಸೆಪ್ಟೆಂಬರ್ 2021 ರವರೆಗೆ ASI ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. .

ದಿಃ 16-04-2021 ರಂದು ನಾನು ಠಾಣಾ ಪ್ರಭಾರದಲ್ಲಿದಾಗ ಬೆಳಗ್ಗೆ 8.30 ಗಂಟೆಯಲ್ಲಿ ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು ಠಾಣಾ ಮೊ. ಸಂಖ್ಯೆ 91/2021 ರಲ್ಲಿ ಪ್ರಕರಣ ದಾಖಲಿಸಿ ಪ್ರ ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ .

ನಿಪಿ -1 ರಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -1 (ಬಿ ) ಎಂದು ಗುರುತಿಸಲಾಯಿತು.

ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಇಬ್ಬರು ಪಂಚಾಯಿತಿದಾರರ ಚಾಸಾ -3 ಮತ್ತು 5 ರವರ ಸಮಕ್ಷಮ ಮಧ್ಯಾಹ್ನ 3.30 ರಿಂದ 4.15 ರವರೆಗೆ ಗಂಟೆಯವರೆಗೆ ನಿಪಿ -2 ರಂತೆ ಸ್ಥಳ ಪಂಚನಾಮೆಯನ್ನು ನಡೆಸಿರುತ್ತೇನೆ. ಆ ಸಮಯ ಒಂದು ರೋಟಿ ಕುಡುಗೋಲು ವಶಪಡಿಸಿಕೊಂಡಿದ್ದೇನೆ .

ನಿಪಿ -2 ರಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -2 (ಡಿ ) ಎಂದು ಗುರುತಿಸಲಾಯಿತು.

ಅದೇ ದಿನ ಆರೋಪಿತರುಗಳ ಸ್ವ ಇಚ್ಛಾ ಹೇಳಿಕೆ ಪಡೆದಿದ್ದೇನೆ ಮತ್ತು ಚಾಸಾ -4 ರವರ ಹೇಳಿಕೆ ಪಡೆದಿದ್ದೇನೆ .

ಆರೋಪಿತರುಗಳ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ ಸೂಕ್ತ ಜಾಮೀನಿನ ಮೂಲಕ ಬಿಡುಗಡೆ ಮಾಡಿರುತ್ತೇನೆ .

ಚಾಸಾ -1 ರವರ ಮುಂದುವರೆದ ಹೇಳಿಕೆ ಪಡೆದಿದ್ದೇನೆ ಮತ್ತು ಚಾಸಾ -2 ರವರ ಹೇಳಿಕೆ ಪಡೆದಿದ್ದೇನೆ.

ನಂತರ ಮುಂದುವರೆದ ತನಿಖೆಗಾಗಿ ಕಡತವನ್ನು ಚಾಸಾ -8 ರವರಿಗೆ ಹಸ್ತಾಂತರಿಸಿದ್ದೇನೆ .

ನಿಪಿ -2 ರಡಿಯಲ್ಲಿ ವಶಪಡಿಸಿಕೊಂಡ ರೋಟಿ ಕುಡುಗೋಲನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಮು ಮಾ -1 ನ್ನು ನೋಡಿ ಗುರುತಿಸಿದ್ದಾರೆ.

ಆರೋಪಿತರುಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿ ಹಾಜರಿರುವ 1 ಮತ್ತು 2 ನೇ ಆರೋಪಿತರುಗಳನ್ನು ನೋಡಿ ಗುರುತಿಸಿದ್ದಾರೆ.

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-</u>

ಮೇಲೆ ಹೇಳಿದ ದಿನಾಂಕದಂದು ನಾನು ಯಾವುದೇ ಸ್ಥಳಕ್ಕೆ ಭೇಟಿ ನೀಡಿಲ್ಲ ಎಂದರೆ ಸರಿಯಲ್ಲ. ಪಂಚಾಯಿತಿದಾರರಿಗೆ ಪಂಚನಾಮೆಗೆ ಬರಬೇಕೆಂದು ತಿಳಿಸಿ ನೋಟಿಸ್ ನೀಡಿಲ್ಲ. ನಾನು ಭೇಟಿ ನೀಡಿದ್ದ ಸ್ಥಳದ ಸ್ವತ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿಲ್ಲ. ನಾನು ಭೇಟಿ ನೀಡಿದ್ದೇ ಎಂದು ಹೇಳುವ ಸ್ಥಳದ ಚಕ್ಕುಬಂದಿ ಗೊತ್ತಿಲ್ಲ. ನಾನು ಹೇಳುವಂತೆ ಮೇಲೆ ಹೇಳಿದ ದಿನಾಂಕದಂದು ಯಾವುದೇ ಯಾವುದೇ ಸ್ಥಳಕ್ಕೆ ಭೇಟಿ ನೀಡಿಲ್ಲ, ಯಾವುದೇ ಪಂಚನಾಮೆ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಮು ಮಾ -1 ರಂತಹ ಕುಡುಗೋಲನ್ನು ಬೇಲಿ ಕಡಿಯಲು ಉಪಯೋಗಿಸುತ್ತಾರೆ ಎಂದರೆ ಇರಬಹುದು ಎಂದು ಸಾಕ್ಷಿ ತಿಳಿಸಿದ್ದಾರೆ. ನಾನು ಹೇಳುವಂತೆ ಮು ಮಾ -1 ನ್ನು ಸ್ಥಳದಲ್ಲಿ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು ಮಾ -1 ರೋಟಿ ಕುಡುಗೋಲು ಅಲ್ಲ ಎಂದರೆ ಸರಿಯಲ್ಲ. ಮು ಮಾ -1 ನ್ನು ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಮು ಮಾ -1 ಕುಡುಗೋಲು ಕಬ್ಬಿಣದ ವಸ್ತುಗಳನ್ನು ಮಾರಾಟ ಮಾಡುವ ಅಂಗಡಿಯಲ್ಲಿ ಸಿಗುತ್ತದೆ ಎಂದರೆ ಸರಿಯಲ್ಲ. ಆರೋಪಿತರುಗಳಿಗೆ ತೊಂದರೆ ನೀಡುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣಾ ಅಂಕಿ ಅಂಶಗಳ ಹೆಚ್ಚುವರಿಗಾಗಿ ಆರೋಪಿತರುಗಳ ವಿರುದ್ಧ ಸುಳ್ಳು ವಿವರಗಳ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಎರಡು ದಿನ ತಡವಾಗಿ ದೂರು ನೀಡಲಾಗಿದೆ ಎಂದರೆ ಸಾಕ್ಷಿಯು ಚಿಕಿತ್ಸೆ ಪಡೆದ ನಂತರ ತಡವಾಗಿ ಬಂದು ದೂರು ನೀಡಿದ್ದೇವೆ ಎಂದು ದೂರಿನಲ್ಲಿಯೇ ಬರೆಯಲಾಗಿದೆ ಎಂದು ತಿಳಿಸಿದ್ದಾರೆ. ಚಿಕಿತ್ಸೆ ಪಡೆದಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಚಾಸಾ -1 ರವರ ಮಾತು ಕೇಳಿ ಗಾಯದ ಪ್ರಮಾಣ ಪತ್ರ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರುಗಳ ಹೇಳಿಕೆಗಳನ್ನು ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಸ್ಥಳಕ್ಕೆ ಭೇಟಿ ನೀಡದೇ ಮಹಜರನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ, ಸರಿ ಇದೆ ಎಂದು ಒಪ್ಪಿದ್ದಾರೆ.

SD/-

**(ಅನುಪಮ.ಡಿ)**

ಸಿ.ಸಿ.ನಂ.519/2021

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ

ದಿಃ 06-03-2021 ರಂದು ಮಧ್ಯಾಹ್ನ 12.30 ಗಂಟೆಗೆ ಈ ಕೇಸಿನ ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ಮುದ್ರಿತ ದೂರನ್ನು ಪಡೆದು ಠಾಣಾ ಮೊ. ಸಂಖ್ಯೆ 50/2021 ರಲ್ಲಿ ಪ್ರಕರಣ ದಾಖಲಿಸಿ ಪ್ರ ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ .

ಈ ಪ್ರಕರಣವು ಘೋರ ಪ್ರಕರಣವಾಗಿರುವುದರಿಂದ ಚಾಸಾ -16 ರವರಿಗೆ ಮುಂದಿನ ತನಿಖೆಗಾಗಿ ಪ್ರಕರಣವನ್ನು ವರ್ಗಾಯಿಸಿದ್ದೇನೆ .

ನಿಪಿ -2 ರಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -2 (ಬಿ ) ಎಂದು ಗುರುತಿಸಲಾಯಿತು.